ಪರಂತು, ರಾಜಸ್ವ ಕೊರತೆ ಮತ್ತು ಆರ್ಥಿಕ ಕೊರತೆಯು, ರಾಷ್ಟ್ರೀಯ ಭದ್ರತೆಗಾಗಿ ಅಥವಾ ನೈಸರ್ಗಿಕ ವಿಕೋಪಗಳಿಂದಾಗಿ, ರಾಜ್ಯಸರ್ಕಾರದ ಹಣಕಾಸಿನ ಮೇಲೆ ಅನಿರೀಕ್ಷಿತ ಬೇಡಿಕೆಯನ್ನುಂಟುಮಾಡುವ ಕಾರಣ ಅಥವಾ ಕಾರಣಗಳಿಂದಾಗಿ ಈ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಮಿತಿಗಳನ್ನು ಮೀರಬಹುದು. ಆದರೆ ನೈಸರ್ಗಿಕ ವಿಕೋಪಗಳಿಂದಾಗಿ ಮಿತಿಗಳನ್ನು ಮೀರಿ ಆಗಿರುವ ಹೆಚ್ಚುವರಿಗಳು, ಆ ವಿಕೋಪಗಳಿಂದ ಆಯಿತೆನ್ನಲಾದ ವಾಸ್ತವಿಕ ಆರ್ಥಿಕ ವೆಚ್ಚವನ್ನು ಮೀರತಕ್ಕದ್ದಲ್ಲವೆಂಬ ಷರತ್ತಿಗೊಳಪಟ್ಟಿರಬೇಕು.

ಮತ್ತು ಪರಂತು, ಅಂಥ ಕೊರತೆಯ ಮೊಬಲಗು ಮೇಲೆ ಹೇಳಿದ ಮಿತಿಗಳನ್ನು ಮೀರಬಹುದಾದ ಸಂಭಾವ್ಯತೆ ಉಂಟಾದ ತರುವಾಯ ಮೊದಲನೇ ಪರಂತುಕದಲ್ಲಿ ನಿರ್ದಿಷ್ಟಪಡಿಸಿದ ಕಾರಣ ಅಥವಾ ಕಾರಣಗಳನ್ನು, ಸಂಭವನೀಯ ಹೆಚ್ಚುವರಿಗಳು ಮತ್ತು ಅವುಗಳಿಗೆ ಕಾರಣಗಳನ್ನು ತೋರಿಸುವ ವರದಿಯೊಡನೆ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

ಅನುಬಂಧ – 6

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)
ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 24)

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ನೇ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 45–ಎ ಪ್ರಕರಣದ ತಿದ್ದುಪಡಿ.– ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನು ಮುಂದೆ ಮೂಲ

ಅಧಿನಿಯಮವೆಂದು ಕರೆಯಲಾಗಿದೆ) 45–ಎ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ,–

(ಎ) (ಎಚ್) ಖಂಡಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಚ್) 30ನೇ ಅನುಚ್ಛೇದದ (iv) ನೇ ಬಾಬಿನಡಿಯಲ್ಲಿ ಒಳಗೊಂಡ ಒಂದು ಗುತ್ತಿಗೆ;"

(ಬಿ) (i) ನೇ ಖಂಡದಲ್ಲಿ, "ಖಂಡ (ಇಬಿ) ಮತ್ತು ಖಂಡ (ಇಎ)" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಕ್ಷರಗಳಿಗೆ "ಖಂಡ (ಇ), ಖಂಡ (ಇಎ) ಮತ್ತು ಖಂಡ (ಇಬಿ)" ಎಂಬ ಪದಗಳು, ಆವರಣ ಚಿಹ್ನೆಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

2. **ಅನುಸೂಚಿಯ ತಿದ್ದುಪಡಿ.**– ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗಿದೆ) ಅನುಸೂಚಿಯಲ್ಲಿ,–

(1) 5ನೇ ಅನುಚ್ಛೇದದಲ್ಲಿ,

(ಎ) (ಇ) ಖಂಡದಲ್ಲಿ (ii) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ii) ಸ್ವತ್ತಿನ ಸ್ವಾಧೀನತೆಯನ್ನು ಕೊಡದಿರುವಾಗ	ಪ್ರತಿಫಲಧನದ ಮೊತ್ತಕ್ಕೆ ಸಮಾನವಾದ ಮಾರುಕಟ್ಟೆ ಬೆಲೆಯ ಮೇಲೆ ಪ್ರತಿ ನೂರು ರೂಪಾಯಿಗೆ ಅಥವಾ ಅದರ ಭಾಗಕ್ಕೆ 0.25 ರೂಪಾಯಿ.
(ಬಿ) (ಎಫ್) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–	
"5(ಎಫ್) ಬಹುಘಟಕ ಮನೆ ಅಥವಾ ಕಟ್ಟಡ ಅಥವಾ ಅಪಾರ್ಟ್‌ಮೆಂಟ್‌ನ ಘಟಕ/ಫ್ಲಾಟ್/ಬಹುಮಹಡಿ ಕಟ್ಟಡದ ಒಂದು ಭಾಗ ಇವು ಒಳಗೊಂಡಂತೆ ಸ್ಥಿರ ಆಸ್ತಿಯ ನಿರ್ಮಾಣ/ ಒಳಗೊಂಡಂತೆ ಸ್ಥಿರ ಆಸ್ತಿಯ ನಿರ್ಮಾಣ/ ಅಭಿವೃದ್ಧಿ/ ಮಾರಾಟಕ್ಕೆ ಸಂಬಂಧಿಸಿದಂತೆ, ನಿರ್ಮಾಣ/ಅಭಿವೃದ್ಧಿಯ ತರುವಾಯ ಅಂಥ ಆಸ್ತಿಯನ್ನು ವ್ಯಕ್ತಿ ಮತ್ತು	(ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ 28ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಆದ ಒಪ್ಪಂದದಡಿಯಲ್ಲಿನ ಅಂಥಾ ವರ್ಗಾವಣೆಯ ವಸ್ತು ವಿಷಯವಾಗಿರುವ); ಆಸ್ತಿಯ ಮಾರುಕಟ್ಟೆ ಬೆಲೆ ಮತ್ತು/ಅಥವಾ ಆಸ್ತಿಯ ನಿರ್ಮಾಣದ ಅಥವಾ ಪ್ರಸ್ತಾವಿತ ನಿರ್ಮಾಣದ ಸಂದರ್ಭಾನುಸಾರ ಅಭಿವೃದ್ಧಿ ಅಥವಾ

ಸಂದರ್ಭಾನುಸಾರ ಮಾಲೀಕ ಅಥವಾ ಗುತ್ತಿಗೆದಾರ ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಹೊಂದಿರತಕ್ಕದ್ದು ಎಂದು ಅಥವಾ ಅಂಥ ಆಸ್ತಿಯನ್ನು ಅವರು ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಮಾರತಕ್ಕದ್ದು ಅಥವಾ ಅದರ ಒಂದು ಭಾಗವನ್ನು ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಹೊಂದಿರತಕ್ಕದ್ದು ಮತ್ತು ಅದರ ಉಳಿದ ಭಾಗವನ್ನು ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಮಾರಾಟ ಮಾಡತಕ್ಕದ್ದು ಎಂಬ ಷರತ್ತನ್ನು ಒಪ್ಪಂದದಲ್ಲಿ ಹೊಂದಿರುವ ಒಬ್ಬ ವ್ಯಕ್ತಿ. **ವಿವರಣೆ–1:** (1) "ಗುತ್ತಿಗೆದಾರ" ಎಂಬ ಪದವು ಮೂವತ್ತು ವರ್ಷಗಳಿಗೆ ಮೀರಿದ ಅಥವಾ ಇನ್ನೂ ಹೆಚ್ಚಿನ ಅವಧಿಗೆ ಅಥವಾ ಶಾಶ್ವತವಾಗಿ ಅಥವಾ ಯಾವುದೇ ನಿರ್ದಿಷ್ಟ ಅವಧಿಗಲ್ಲವೆಂದು ತಾತ್ಪರ್ಯವಾಗುವ ಗುತ್ತಿಗೆಯನ್ನು ಹೊಂದಿರುವವನು ಎಂಬ ಅರ್ಥವನ್ನು ಹೊಂದಿರತಕ್ಕದ್ದು. (2) "ಕಟ್ಟಡ" ಎಂಬ ಪದವು ಒಂದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್/ಫ್ಲಾಟ್/ಕಚೇರಿ ಸ್ಥಳಾವಕಾಶ ಅಥವಾ ಬಹುಮಹಡಿ ಕಟ್ಟಡದ ಭಾಗವನ್ನು ಹೊಂದಿರುವ ಒಂದು ಕಟ್ಟಡ ಎಂಬ ಅರ್ಥವನ್ನು ಹೊಂದಿರತಕ್ಕದ್ದು. **ವಿವರಣೆ 2:** (ಇ) ಖಂಡ, (ಎಫ್) ಖಂಡ ಮತ್ತು (ಎಚ್) ಖಂಡದ ಉದ್ದೇಶಕ್ಕಾಗಿ ಅಂಥ ಒಪ್ಪಂದ ಅಥವಾ ಅದರ ದಾಖಲೆಗಳು ಅಥವಾ	ಪ್ರಸ್ತಾವಿತ ಅಭಿವೃದ್ಧಿಯ ಅಂದಾಜು ಬೆಲೆ ಅಥವಾ ಅಂಥ ವರ್ಗಾವಣೆಯ ಪ್ರತಿಫಲಧನ–ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಪ್ರತಿಯೊಂದು ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ: ಪರಂತು ಅದೇ ಆಸ್ತಿಯ ಸಂಬಂಧದಲ್ಲಿ ಅದೇ ಪಕ್ಷಕಾರರ ನಡುವೆ ಮಾಡಿಕೊಂಡ ಮುಖ್ತ್ಯಾರನಾಮೆಯ ಮೇಲೆ 41ನೇ ಅನುಚ್ಛೇದದ (ಇ), (ಇಎ) ಮತ್ತು (ಇಬಿ) ಖಂಡದಲ್ಲಿ ಯುಕ್ತವಾದ ಸ್ಟ್ಯಾಂಪು ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ ಆಗ ಈ ಅನುಚ್ಛೇದದ ಅಡಿಯಲ್ಲಿನ ಸ್ಟ್ಯಾಂಪು ಶುಲ್ಕವು 5(i)ನೇ ಅನುಚ್ಛೇದದನ್ವಯ ಇರತಕ್ಕದ್ದು.

ಜ್ಞಾಪನಪತ್ರವನ್ನು ಅನುಸರಿಸಿ ತರುವಾಯದಲ್ಲಿ ಹಸ್ತಾಂತರಣ ಪತ್ರ ಅಥವಾ ಸಂದರ್ಭಾನುಸಾರ ಅಡಮಾನ ಪತ್ರವನ್ನು ಅದೇ ಪಕ್ಷಕ್ಕಾರರು ತಮ್ಮ ನಡುವೆ ಬರೆದುಕೊಟ್ಟಿರುವಲ್ಲಿ, ಒಪ್ಪಂದದ ಅಥವಾ ಅದರ ದಾಖಲೆಗಳ ಅಥವಾ ಜ್ಞಾಪನಪತ್ರದ ಮೇಲೆ ಈಗಾಗಲೇ ಸಂದಾಯ ಮಾಡಿದ ಅಥವಾ ವಸೂಲಿ ಮಾಡಿದ ಸ್ಟ್ಯಾಂಪು ಶುಲ್ಕವೇನಾದರೂ ಇದ್ದಲ್ಲಿ ಅದನ್ನು ಹಸ್ತಾಂತರಣ ಪತ್ರ ಅಥವಾ ಅಡಮಾನ ಪತ್ರದ ಮೇಲೆ ವಿಧಿಸತಕ್ಕ ಒಟ್ಟು ಶುಲ್ಕಕ್ಕೆ ಸರಿಹೊಂದಿಸತಕ್ಕದ್ದು.	

(ಸಿ) (i) ಖಂಡದಲ್ಲಿ, (3)ನೇ ಅಂಕಣದಲ್ಲಿ "ಐವತ್ತು ರೂಪಾಯಿಗಳು" ಎಂಬ ಪದಗಳಿಗೆ "ಇನ್ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) 11ನೇ ಅನುಚ್ಛೇದಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"11. ಐತೀರ್ಪು.– ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೂಲಕವಾಗಿ ಅಲ್ಲದೆ ಅನ್ಯಥಾ ಕಳುಹಿಸಿಕೊಟ್ಟಿದ್ದರ ಮೇಲೆ ಆಸ್ತಿ ವಿಭಜನೆಯನ್ನು ನಿರ್ದೇಶಿಸುವ ಐತೀರ್ಪು ಆಗಿರದ ಮಧ್ಯಸ್ಥಗಾರ ಅಥವಾ ನ್ಯಾಯನಿರ್ಣಾಯಕನು ಲಿಖಿತದಲ್ಲಿ ಕೊಟ್ಟ ಯಾವುದೇ ತೀರ್ಮಾನ.	(ಐತೀರ್ಪಿನ ವಸ್ತು ವಿಷಯವಾಗಿರುವ) ಆಸ್ತಿಯ ಮೊಬಲಗು ಅಥವಾ ಮಾರುಕಟ್ಟೆ ಮೌಲ್ಯ ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ [20(1)ನೇ ಅನುಚ್ಛೇದದಡಿಯಲ್ಲಿ] ಹಸ್ತಾಂತರಣ ಪತ್ರಕ್ಕೆ ವಿಧಿಸುವ ಶುಲ್ಕ.

(3) 20ನೇ ಅನುಚ್ಛೇದದಲ್ಲಿ,–

(ಎ) (1)ನೇ ಖಂಡದಲ್ಲಿ, 3ನೇ ಅಂಕಣದಲ್ಲಿ "ಮೌಲ್ಯದ ಶೇಕಡ ಏಳೂವರೆ" ಎಂಬ ಪದಗಳಿಗೆ "ಮೌಲ್ಯದ ಶೇಕಡ ಆರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (6)ನೇ ಖಂಡದ (2)ನೇ ಅಂಕಣದಲ್ಲಿ "ಭದ್ರತೀಕರಣ" ಎಂಬ ಪದದ ತರುವಾಯ "ಹಾಗೂ ಪುನರ್ನಿರ್ಮಾಣ ಮತ್ತು ಭದ್ರತೆಯ ಬಡ್ಡಿಯ ಅಮಲು ಜಾರಿ ಅಧಿನಿಯಮ, 2002ರ ಅಡಿಯಲ್ಲಿ "ಎಂಬ ಪದಗಳನ್ನು ಅಂಕಿಗಳನ್ನು ಸೇರಿಸತಕ್ಕದ್ದು.

(4) 22ನೇ ಅನುಚ್ಛೇದದಲ್ಲಿ.–

(ಎ) (ಎ) ಖಂಡದ (2)ನೇ ಅಂಕಣದಲ್ಲಿ "ನಾಲ್ಕು ರೂಪಾಯಿ ಐವತ್ತು ಪೈಸೆಗಳು" ಎಂಬ ಪದಗಳಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (ಬಿ) ಖಂಡದ (3)ನೇ ಅಂಕಣದಲ್ಲಿ "ಐವತ್ತು ರೂಪಾಯಿ" ಎಂಬ ಪದಗಳಿಗೆ "ಐದು ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(5) 28ನೇ ಅನುಚ್ಛೇದದಲ್ಲಿ, ವಿವರಣೆಯಲ್ಲಿ, "ಎಂದರೆ" ಎಂಬ ಪದದ ತರುವಾಯ "ತಂದೆ,ತಾಯಿ," ಎಂಬ ಪದಗಳು ಮತ್ತು ಅಲ್ಪವಿರಾಮ ಚಿಹ್ನೆಗಳನ್ನು ಸೇರಿಸತಕ್ಕದ್ದು.

(6) 30ನೇ ಅನುಚ್ಛೇದದ (1)ನೇ ಖಂಡಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಒಳಗುತ್ತಿಗೆ ಅಥವಾ ಉಪ ಗುತ್ತಿಗೆ ಮತ್ತು ಬಾಡಿಗೆ ಅಥವಾ ಉಪ ಬಾಡಿಗೆಯ ಯಾವುದೇ ಒಪ್ಪಂದವನ್ನೊಳಗೊಂಡ ಸ್ಥಿರ ಆಸ್ತಿಯ ಗುತ್ತಿಗೆ; ಅಂಥ ಗುತ್ತಿಗೆಯಿಂದ, ಬಾಡಿಗೆಯನ್ನು ನಿಗದಿಪಡಿಸಲಾಗಿದ್ದಲ್ಲಿ ಅಥವಾ/ಮತ್ತು ದಂಡ ಅಥವಾ ಕಂತು ಅಥವಾ ಮುಂಗಡ ಹಣ (ಸಂದರ್ಭಾನುಸಾರ) ಭದ್ರತಾ ಠೇವಣಿಯನ್ನು ಸಂದಾಯಮಾಡಿದ್ದಲ್ಲಿ ಅಥವಾ ಕೊಟ್ಟಿದ್ದಲ್ಲಿ.	
(i) ಐದು ವರ್ಷದ ಮೀರಿರದ ಅವಧಿಗೆ ಗುತ್ತಿಗೆಯೆಂದು ತಾತ್ಪರ್ಯವಾಗಿದ್ದಲ್ಲಿ.	ಸರಾಸರಿ ವಾರ್ಷಿಕ ಬಾಡಿಗೆ ಮತ್ತು ಅಂಥ ಗುತ್ತಿಗೆಯಡಿಯಲ್ಲಿ ಸಂದರ್ಭಾನುಸಾರ ಸಂದಾಯ ಮಾಡತಕ್ಕ ಅಥವಾ ಕೊಡತಕ್ಕ ದಂಡ ಅಥವಾ ಕಂತು ಅಥವಾ ಮುಂಗಡದ ಹಣ/ಭದ್ರತಾ ಠೇವಣಿಯ ಒಟ್ಟು

	ಮೊತ್ತದ ಮೇಲೆ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ;
(ii) ಗುತ್ತಿಗೆಯ ಐದು ವರ್ಷಗಳ ಅವಧಿಯನ್ನು ಮೀರಿದ್ದು ಆದರೆ ಹತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಮತ್ತು ಅಂಥ ಗುತ್ತಿಗೆಯಡಿಯಲ್ಲಿ ಸಂದರ್ಭಾನುಸಾರ ಸಂದಾಯಮಾಡತಕ್ಕ ಅಥವಾ ಕೊಡತಕ್ಕ ದಂಡ ಅಥವಾ ಕಂತು ಅಥವಾ ಮುಂಗಡ ಹಣ/ಭದ್ರತಾ ಠೇವಣಿಯ ಒಟ್ಟು ಮೊತ್ತದ ಮೇಲೆ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಎರಡು ರೂಪಾಯಿಗಳು;
(iii) ಗುತ್ತಿಗೆಯು ಹತ್ತು ವರ್ಷಗಳ ಅವಧಿಯನ್ನು ಮೀರಿದ್ದು ಆದರೆ ಮೂವತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಮತ್ತು ಅಂಥ ಗುತ್ತಿಗೆಯ ಅಡಿಯಲ್ಲಿ ಸಂದರ್ಭಾನುಸಾರ ಸಂದಾಯ ಮಾಡತಕ್ಕ ಅಥವಾ ಕೊಡತಕ್ಕ ದಂಡ ಅಥವಾ ಕಂತು ಅಥವಾ ಮುಂಗಡ ಹಣ/ಭದ್ರತಾ ಠೇವಣಿಯ ಒಟ್ಟು ಮೊತ್ತದ ಮೇಲೆ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ನಾಲ್ಕು ರೂಪಾಯಿಗಳು.

(7) 32–ಎ ಅನುಚ್ಛೇದ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"32ಎ. ಸ್ಥಿರ ಮತ್ತು ಚರ ಸ್ವತ್ತುಗಳಿಗೆ ಲೈಸೆನ್ಸು.– ಅಂದರೆ ಬಾಡಿಗೆಗಾಗಿ ಅಥವಾ ಶುಲ್ಕಕ್ಕಾಗಿ ಅಥವಾ ಅದನ್ನು ಯಾವುದೇ ಹೆಸರಿನಿಂದ ಕರೆಯಲಿ ಅದಕ್ಕಾಗಿ ಮತ್ತು ಮುಂಗಡದ ಹಣ/ಭದ್ರತಾ ಠೇವಣಿಗಾಗಿ ಮಾಲೀಕನಿಂದ ಅಥವಾ	

ಪ್ರಾಧಿಕಾರದಿಂದ ಮಂಜೂರಾದ ಲೈಸೆನ್ಸು	
(i) ಲೈಸೆನ್ಸು ಐದು ವರ್ಷಗಳ ಅವಧಿಗೆ ಮೀರಿದ್ದು ಆದರೆ ಹತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಅಥವಾ ಶುಲ್ಕ ಅಥವಾ ಯಾವುದೇ ಹೆಸರಿನಿಂದ ಅದನ್ನು ಕರೆಯಲಿ ಅದು ಮತ್ತು ಅಂಥ ಲೈಸೆನ್ಸಿನ ಅಡಿಯಲ್ಲಿ ಮುಂಗಡವಾಗಿ ಕೊಟ್ಟ ಹಣ/ಭದ್ರತೆ ಠೇವಣಿ–ಇವುಗಳ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ.
(ii) ಲೈಸೆನ್ಸು ಐದು ವರ್ಷಗಳ ಅವಧಿಗೆ ಮೀರಿದ್ದು ಆದರೆ ಹತ್ತು ವರ್ಷಗಳನ್ನು ಮೀರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಅಥವಾ ಶುಲ್ಕ ಅಥವಾ ಯಾವುದೇ ಹೆಸರಿನಿಂದ ಕರೆಯಲಿ ಮತ್ತು ಅಂಥ ಲೈಸೆನ್ಸಿನ ಅಡಿಯಲ್ಲಿ ಸಂದಾಯ ಮಾಡತಕ್ಕ ಅಥವಾ ಕೊಡತಕ್ಕ ಮುಂಗಡ ಹಣ/ಭದ್ರತಾ ಠೇವಣಿಯ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗದ ಮೇಲೆ ಎರಡು ರೂಪಾಯಿಗಳು."
(iii) ಲೈಸೆನ್ಸು ಹತ್ತು ವರ್ಷಗಳ ಅವಧಿಗೆ ಮೀರಿದ್ದು ಆದರೆ ಮೂವತ್ತು ವರ್ಷಗಳನ್ನು ಮಿರತಕ್ಕದ್ದಲ್ಲ ಎಂದು ತಾತ್ಪರ್ಯವಾದರೆ	ಸರಾಸರಿ ವಾರ್ಷಿಕ ಬಾಡಿಗೆ ಅಥವಾ ಶುಲ್ಕ ಅಥವಾ ಯಾವುದೇ ಹೆಸರಿನಿಂದ ಕರೆಯಲಿ ಮತ್ತು ಅಂಥ ಲೈಸೆನ್ಸಿನ ಅಡಿಯಲ್ಲಿ ಸಂದಾಯ ಮಾಡತಕ್ಕ ಅಥವಾ ಕೊಡತಕ್ಕ ಮುಂಗಡ ಹಣ/ಭದ್ರತಾ ಠೇವಣಿಯು ಪ್ರತಿ ನೂರು ರೂಪಾಯಿತಗಳಿಗೆ ನಾಲ್ಕು ರೂಪಾಯಿಗಳು."

(8) 41ನೇ ಅನುಚ್ಛೇದದಲ್ಲಿ,–

(ಎ) (ಇ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಇ) ಪ್ರತಿಫಲಧನಕ್ಕೆ ಕೊಟ್ಟಿರುವಾಗ ಮತ್ತು/ಅಥವಾ ಜೊತೆಗೆ ಹಿತಾಸಕ್ತಿಯನ್ನು ಮತ್ತು ಯಾವುದೇ	ಪ್ರತಿಫಲಧನ ಅಥವಾ ಮುಖ್ಯಾರುನಾಮೆಯ ವಸ್ತು ವಿಷಯವಾದ ಸ್ವತ್ತಿನ ಮಾರುಕಟ್ಟೆ

ಸ್ಥಿರ ಆಸ್ತಿಯನ್ನು ಮಾರಾಟ ಮಾಡುವ ಅವಕಾಶವನ್ನು ಕೊಟ್ಟಿರುವಾಗ	ಮೌಲ್ಯ ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ [20(1)ನೇ ಅನುಚ್ಛೇದದ] ಅಡಿಯಲ್ಲಿ ಹಸ್ತಾಂತರ ಪತ್ರಕ್ಕೆ ವಿಧಿಸುವಷ್ಟೇ ಶುಲ್ಕ.

(ಬಿ) (ಇಎ) ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಇಎ) ಬಹುಘಟಕ ಮನೆ ಅಥವಾ ಕಟ್ಟಡ ಅಥವಾ ಅಪಾರ್ಟ್‌ಮೆಂಟ್‌ನ ಘಟಕ/ಪ್ಲಾಟ್/ಬಹುಮಹಡಿ ಕಟ್ಟಡದ ಒಂದು ಭಾಗ ಇವು ಒಳಗೊಂಡಂತೆ ಸ್ಥಿರ ಆಸ್ತಿಯ ನಿರ್ಮಾಣ/ ಅಭಿವೃದ್ಧಿ/ ಮಾರುಕಟ್ಟೆ ಸಂಬಂಧಿಸಿದಂತೆ, ನಿರ್ಮಾಣ/ ಅಭಿವೃದ್ಧಿಯ ತರುವಾಯ ಅಂಥ ಆಸ್ತಿಯನ್ನು ಆ ವ್ಯಕ್ತಿ ಮತ್ತು ಸಂದರ್ಭಾನುಸಾರ ಮಾಲೀಕ ಅಥವಾ ಗುತ್ತಿಗೆದಾರ ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಹೊಂದಿರತಕ್ಕದ್ದೆಂದು ಅಥವಾ ಅಂಥ ಆಸ್ತಿಯನ್ನು ಅವರು ಜಂಟಿಯಾಗಿ ಅಥವಾ ಬೇರೆ ಬೇರೆಯಾಗಿ ಮಾರತಕ್ಕದ್ದು ಅಥವಾ ಅದರ ಒಂದು ಭಾಗವನ್ನು ಅವರು ಜಂಟಿಯಾಗಿ ಅಥವಾ ಬೇರೆ ಬೇರೆಯಾಗಿ ಹೊಂದಿರತಕ್ಕದ್ದು ಮತ್ತು ಅದರ ಉಳಿದ ಭಾಗವನ್ನು ಜಂಟಿಯಾಗಿ ಅಥವಾ ಬೇರೆಬೇರೆಯಾಗಿ ಮಾರಾಟ ಮಾಡತಕ್ಕದ್ದು ಎಂಬ ಷರತ್ತನ್ನು ಒಪ್ಪಂದದಲ್ಲಿ ಹೊಂದಿರುವ ಒಬ್ಬ ವ್ಯಕ್ತಿ. ವಿವರಣೆ 1:	(ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ 28ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಆದ ಒಪ್ಪಂದದಡಿಯಲ್ಲಿನ ಅಂಥಾ ವರ್ಗಾವಣೆಯ ವಸ್ತು ವಿಷಯವಾಗಿರುವ); ಆಸ್ತಿಯ ಮಾರುಕಟ್ಟೆ ಬೆಲೆ ಮತ್ತು /ಅಥವಾ ಆಸ್ತಿಯ ನಿರ್ಮಾಣದ ಅಥವಾ ಪ್ರಸ್ತಾವಿತ ನಿರ್ಮಾಣದ ಸಂದರ್ಭಾನುಸಾರ ಅಭಿವೃದ್ಧಿ ಅಥವಾ ಪ್ರಸ್ತಾವಿತ ಅಭಿವೃದ್ಧಿಯ ಅಂದಾಜು ಬೆಲೆ ಅಥವಾ ಅಂಥ ವರ್ಗಾವಣೆಯ ಪ್ರತಿಫಲಧನ–ಇವುಗಳಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಪ್ರತಿಯೊಂದು ಒಂದು ನೂರು ರೂಪಾಯಿಗಳಿಗೆ ಅಥವ ಅದರ ಭಾಗಕ್ಕೆ ಒಂದು ರೂಪಾಯಿ: ಪರಂತು ಅದೇ ಆಸ್ತಿಯ ಸಂಬಂಧದಲ್ಲಿ ಅದೇ ಪಕ್ಷಕಾರರ ನಡುವೆ ಮಾಡಿಕೊಂಡ ಮುಖ್ತ್ಯಾರುನಾಮೆಯ ಮೇಲೆ 5ನೇ ಅನುಚ್ಛೇದದ (ಇ), (ಇಎ) ಮತ್ತು (ಇಬಿ) ಖಂಡದಲ್ಲಿ ಯುಕ್ತವಾದ ಸ್ಟ್ಯಾಂಪು ಶುಲ್ಕವನ್ನು

(1) "ಗುತ್ತಿಗೆದಾರ" ಎಂಬ ಪದವು ಮೂವತ್ತು ವರ್ಷಗಳಿಗೆ ಮೀರಿದ ಅಥವಾ ಇದನ್ನು ಹೆಚ್ಚಿನ ಅವಧಿಗೆ ಅಥವಾ ಶಾಶ್ವತವಾಗಿ ಅಥವಾ ಯಾವುದೇ ನಿರ್ದಿಷ್ಟ ಅವಧಿಗಲ್ಲವೆಂದು ತಾತ್ಪರ್ಯವಾಗುವ ಗುತ್ತಿಗೆಯನ್ನು ಹೊಂದಿರುವವನು ಎಂಬ ಅರ್ಥವನ್ನು ಹೊಂದಿರತಕ್ಕದ್ದು. (2) "ಕಟ್ಟಡ" ಎಂಬ ಪದವು ಒದಕ್ಕಿಂತ ಹೆಚ್ಚು ಅಪಾರ್ಟ್‌ಮೆಂಟ್/ಫ್ಲಾಟ್/ ಕಚೇರಿ ಸ್ಥಳಾವಕಾಶ ಅಥವಾ ಬಹುಮಹಡಿ ಕಟ್ಟಡದ ಭಾಗವನ್ನು ಹೊಂದಿರುವ ಒಂದು ಕಟ್ಟಡ ಎಂಬ ಅರ್ಥವನ್ನು ಹೊಂದಿರತಕ್ಕದ್ದು. ವಿವರಣೆ 2: (ಇ) ಖಂಡ, (ಎಫ್) ಖಂಡ ಮತ್ತು (ಎಚ್) ಖಂಡದ ಉದ್ದೇಶಕ್ಕಾಗಿ ಅಂಥ ಒಪ್ಪಂದ ಅಥವಾ ಅದರ ದಾಖಲೆಗಳು ಅಥವಾ ಜ್ಞಾಪನಪತ್ರವನ್ನನುಸರಿಸಿ ತರುವಾಯದಲ್ಲಿ ಸಂದರ್ಭಾನುಸಾರ ಹಸ್ತಾಂತರಣಪತ್ರವನ್ನು ಅಥವಾ ಅಡಮಾನ ಪತ್ರವನ್ನು ಅದೇ ಪಕ್ಷಕ್ಕಾರರು ತಮ್ಮ ನಡುವೆ ಬರೆದು ಕೊಟ್ಟಿರುವಲ್ಲಿ, ಒಪ್ಪಂದದ ಅಥವಾ ಅದರ ದಾಖಲೆಗಳ ಅಥವ ಜ್ಞಾಪನಪತ್ರದ ಮೇಲೆ ಈಗಾಗಲೆ ಸಂದಾಯ ಮಾಡಿದ ಅಥವಾ ವಸೂಲಿ ಮಾಡಿದ ಸ್ಟ್ಯಾಂಪು ಶುಲ್ಕವೇನಾದರೂ ಇದ್ದಲ್ಲಿ ಅದನ್ನು ಹಸ್ತಾಂತರಣ ಪತ್ರ ಅಥವಾ ಅಡಮಾನ ಪತ್ರದ ಮೇಲೆ ವಿಧಿಸತಕ್ಕ ಒಟ್ಟು ಶುಲ್ಕಕ್ಕೆ ಸರಿಹೊಂದಿಸತಕ್ಕದ್ದು.	ಸಂದಾಯ ಮಾಡಿದ್ದಲ್ಲಿ ಆಗ ಈ ಅನುಚ್ಛೇದದ ಅಡಿಯಲ್ಲಿನ ಸ್ಟ್ಯಾಂಪು ಶುಲ್ಕವು 41(ಎಫ್) ಅನುಚ್ಛೇದದನ್ವಯ ಇರತಕ್ಕದ್ದು.

(ಸಿ) (ಎಫ್) ಖಂಡದಲ್ಲಿ, 3ನೇ ಅಂಕಣದಲ್ಲಿ, "ಒಂದು ನೂರು ರೂಪಾಯಿಗಳು" ಎಂಬ ಪದಗಳಿಗೆ "ಇನ್ನೂರು ರೂಪಾಯಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(9) 45ನೇ ಅನುಚ್ಛೇದದಲ್ಲಿ,–

(ಎ) (ಎ) ಖಂಡದಲ್ಲಿ, 3ನೇ ಅಂಕಣದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ) ಗುತ್ತಿಗೆಯು ಕುಟುಂಬ ಸದಸ್ಯರ ನಡುವೆ ಆಗಿರದಿದ್ದಲ್ಲಿ	ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಮತ್ತು/ಅಥವಾ ಕ್ಲೇಮಿನ ಮೊತ್ತದ ಅಥವಾ ಮೌಲ್ಯದ ಮೇಲೆ ಹಸ್ತಾಂತರಣ ಅಥವಾ ಕ್ಲೇಮಿನ ಭಾಗ ಅಥವಾ ಸಂದರ್ಭಾನುಸಾರ (ಬಿಡುಗಡೆಯ ವಸ್ತು ವಿಷಯವಾದ) ಬಿಟ್ಟುಬಿಡಲಾದ ಕ್ಲೇಮಿನ ಭಾಗ ಅಥವಾ ಅಂಥ ಬಿಡುಗಡೆ ಪರ್ಯಾಲೋಚನೆ ಇವುಗಳಲ್ಲಿ ಯಾವುದು ಹೆಚ್ಚೋ ಅದರಂತೆಯೇ ಸುಂಕ."

"ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಮತ್ತು/ಅಥವಾ ಕ್ಲೇಮಿನ ಮೊತ್ತದ ಅಥವಾ ಮೌಲ್ಯದ ಮೇಲೆ ಹಸ್ತಾಂತರಣ ಅಥವಾ ಕ್ಲೇಮಿನ ಭಾಗ ಅಥವಾ ಸಂದರ್ಭಾನುಸಾರ (ಬಿಡುಗಡೆಯ ವಸ್ತು ವಿಷಯವಾದ) ಬಿಟ್ಟುಬಿಡಲಾದ ಕ್ಲೇಮಿನ ಭಾಗ ಅಥವಾ ಅಂಥ ಬಿಡುಗಡೆ ಪರ್ಯಾಲೋಚನೆ ಇವುಗಳಲ್ಲಿ ಯಾವುದು ಹೆಚ್ಚೋ ಅದರಂತೆಯೇ ಸುಂಕ."

(ಬಿ) (ಬಿ) ಖಂಡದಲ್ಲಿ, ವಿವರಣೆಯಲ್ಲಿ,–

(i) "ಸಹೋದರ' ಪದದ ತರುವಾಯ, "ಪತ್ನಿ/ಹಿಂದೆ ಮೃತನಾದ ಸಹೋದರನ ಮಕ್ಕಳ" ಎಂಬ ಪದಗಳು ಮತ್ತು ಅಲ್ಪವಿರಾಮವನ್ನು ಪ್ರತಿಯೋಜಿಸತಕ್ಕದ್ದು.

(ii) "ಸಹೋದರಿ" ಎಂಬ ಪದದ ತರುವಾಯ, "ಪತಿ, ಹಿಂದೆ ಮೃತನಾದ ಸಹೋದರಿಯ ಮಕ್ಕಳು" ಎಂಬ ಪದಗಳು ಮತ್ತು ಅಲ್ಪವಿರಾಮವನ್ನು ಪ್ರತಿಯೋಜಿಸತಕ್ಕದ್ದು.

(10) 48ನೇ ಅನುಚ್ಛೇದದ (ಎ) ಖಂಡದ (ii) ಉಪ ಖಂಡದಲ್ಲಿ, ವಿವರಣೆಯಲ್ಲಿ "ಎಂದರೆ" ಪದದ ತರುವಾಯ "ತಂದೆ ತಾಯಿ" ಎಂಬ' ಪದಗಳು ಮತ್ತು ಅಲ್ಪವಿರಾಮವನ್ನು ಸೇರಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳು ಹೇಳಿಕೆ

2009–10ನೇ ವರ್ಷದ ಆಯವ್ಯಯ ಭಾಷಣದಲ್ಲಿ ಮಾಡಿರುವ ಪ್ರಸ್ತಾವಗಳಿಗೆ ಪರಿಣಾಮ ನೀಡುವ ಉದ್ದೇಶಕ್ಕಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು

(1957ರ ಕರ್ನಾಟಕ ಅಧಿನಿಯಮ 34) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಕೆಲವು ಅನುಷಂಗಿಕ ತಿದ್ದುಪಡಿಗಳನ್ನು ಸಹ ಪ್ರಸ್ತಾವಿಸಲಾಗಿದೆ

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವುಂಟಾಗುವುದಿಲ್ಲ.

ಜಿ. ಕರುಣಾಕರ ರೆಡ್ಡಿ
ಕಂದಾಯಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಉದ್ಧೃತಭಾಗ

xx xx xx

ಅನುಸೂಚಿ

ಲಿಖಿತ ಪತ್ರದ ಮೇಲೆ ಸ್ಟ್ಯಾಂಪ್ ಡ್ಯೂಟಿ

ಅನುಚ್ಛೇದ	ಪ್ರಸ್ತುತ	
	ವಿವರಣೆ	ದರ
5(ಇ) (ii)	(ಇ) ಸ್ಥಿರಾಸ್ತಿಗಳ ಕ್ರಯದ ಕರಾರುಗಳಲ್ಲಿನ ಕರಾರಿನಲ್ಲಿ ಬಾಗಶ: ಪರಿಪಾಲನೆ ಯಾಗಿದ್ದಲ್ಲಿ:– (ii) ಸ್ವತ್ತಿನ ಸ್ವಾಧೀನವನ್ನು ನೀಡದೆ ಇದ್ದಲ್ಲಿ (ಎ) ಸ್ವತ್ತಿನ ಬೆಲೆಯು (i) ರೂ.5,000/–ಗಳನ್ನು ಮೀರದಿದ್ದಾಗ (ii) ರೂ.5,000/–ಗಳನ್ನು ಮೀರಿದ್ದು, ರೂ.20,000/–ಗಳನ್ನು ಮೀರದಿದ್ದಾಗ (iii) ರೂ.20,000/–ಗಳನ್ನು ಮೀರಿದ್ದು, ರೂ.50,000/–ಗಳನ್ನು ಮಿರದಿದ್ದಾಗ (iv) ರೂ.50,000/–ಗಳನ್ನು ಮೀರಿದ್ದಾಗ	ರೂ.10/– ರೂ.20/– ರೂ.100/– ರೂ.200/–
5(ಎಫ್) 1ರಿಂದ 5	ಯಾವುದೇ ಸ್ಥರಾಸ್ತಿಯನ್ನು ನಿರ್ಮಾಣ, ಅಭಿವೃದ್ಧಿ, ಮಾರಾಟ ಅಥವಾ ವರ್ಗಾವಣೆ (ಬೇರೆ ಯಾವುದೇ	

	ಹೆಸರಿನಿಂದ ಕರೆಯಲ್ಪಡಲಿ) ಉದ್ದೇಶಗಳಿಗಾಗಿ ಅಭಿವೃದ್ಧಿಗಾರರಿಗೆ ಅಧಿಕಾರ ನೀಡಿದಾಗ ಸ್ಥತ್ತಿನ ಮಾರುಕಟ್ಟೆ ಮೌಲ್ಯವು	
	1) ರೂ.ಒಂದು ಕೋಟಿಯನ್ನು ಮೀರದಿದ್ದಲ್ಲಿ	ರೂ.10,000/–
	2) ರೂ.ಒಂದು ಕೋಟಿಯನ್ನು ಮೀರಿದ್ದು, ಎರಡು ಕೋಟಿ ಮೀರದಿದ್ದಲ್ಲಿ	ರೂ.20,000/– ರೂ.50,000/–
	3) ರೂ.ಎರಡು ಕೋಟಿಯನ್ನು ಮೀರಿದ್ದು, ಐದು ಕೋಟಿಯನ್ನು ಮೀರದಿದ್ದಲ್ಲಿ	ರೂ.1,00,000.– ರೂ.1,50,000/–
	4) ರೂ. ಐದು ಕೋಟಿಯನ್ನು ಮೀರಿದ್ದು, ಹತ್ತು ಕೋಟಿಯನ್ನು ಮೀರದಿದ್ದಲ್ಲಿ	
	5) ರೂ.ಹತ್ತು ಕೋಟಿಯನ್ನು ಮೀರಿದ್ದಲ್ಲಿ	
	ವಿವರಣೆ: ಕಂಡಿಕೆ (ಇ)ರ ಉಪಕಂಡಿಕೆ (i) ಮತ್ತು (ii) ಮತ್ತು ಕಂಡಿಕೆ (ಹೆಚ್) ಗಳ ಉದ್ದೇಶಕ್ಕಾಗಿ ಜಂಟಿ ಅಭಿವೃದ್ಧಿಕಾರರುಗಳ ಅಥವಾ ದಾಖಲೆಗಳ ಅಥವಾ ಒಡಂಬಡಿಕೆಗಳ ಮುಂದುವರಿಕೆಯಾಗಿ ನಂತರ ಹಸ್ತಾಂತರ ಅಥವಾ ಅಡಮಾನ ಪತ್ರವನ್ನು ಬರೆದುಕೊಟ್ಟಲ್ಲಿ, ಜಂಟಿ ಅಭಿವೃದ್ಧಿ ಕರಾರು ಅಥವಾ ದಾಖಲೆ ಅಥವಾ ಒಡಂಬಡಿಕೆಗಳ ಮೇಲೆ ಈಗಾಗಲೇ ಪಾವತಿಸಿರುವ ಮತ್ತು ವಸೂಲಾಗಿರುವ ಮುದ್ರಾಂಕ ಶುಲ್ಕವನ್ನು ಹಸ್ತಾಂತರ ಪತ್ರ ಅಥವಾ ಅಡಮಾನ ಪತ್ರಗಳ ಮೇಲೆ ವಿಧಿಸಲಾಗುವ ಒಟ್ಟು ಮುದ್ರಾಂಕ ಶುಲ್ಕದ ಬಾಬ್ತು ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.	

ಅನುಚ್ಛೇದ	ಪ್ರಸ್ತುತ	
	ವಿವರಣೆ	ದರ
5(i)	ಅನುಚ್ಛೇದ 5ರ ಈ ಮೇಲಿನ ಯಾವುದೇ ರೀತಿಯ ವಿವರಣೆಗಳಿಗೆ ಹೊರತಾದ ಪತ್ರಗಳಿಗೆ	ರೂ.50/–
11	ಐತೀರ್ಪು ಎಂದರೆ ದಾವೆಯ ಕ್ರಮದಲ್ಲಿ ನ್ಯಾಯಾಲಯದ ಆದೇಶದ ಮೂಲಕ ಅಲ್ಲದೆ ಅನ್ಯಥಾ ಮಾಡಿದ ಉಲ್ಲೇಖದ ಮೇಲೆ ವಿಭಜನೆಯನ್ನು ನಿರ್ದೇಶಿಸುವ ಐತೀರ್ಪು ಆಗಿರದ ಮಧ್ಯಸ್ಥ ಅಥವಾ ನ್ಯಾಯ ನಿರ್ಣಾಯಕನು ಕೊಟ್ಟ ಬರಹದಲ್ಲಿನ ಯಾವುದೆ ತೀರ್ಮಾನ ಅರ್ವಾಡ್‌ನಲ್ಲಿ ಹೇಳಲಾದ ಮೊತ್ತ ಅಥವಾ ಸ್ವತ್ತಿನ ಮಾರುಕಟ್ಟೆ ಮೌಲ್ಯ ಯಾವುದು ಹೆಚ್ಚಿನದೋ ಅದು.	ಅವಾರ್ಡ್‌ನಲ್ಲಿ ಒಳಗೊಂಡಿರುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಅನುಚ್ಛೇದ 12ರಂತೆ ಬಾಂಡ್‌ಗೆ ಅನ್ವಯವಾಗುವ ದರ.
20 (l)	ಸಂ. 52ರ ಮೇರೆಗೆ ವಿಧಿಸಲಾದ ಅಥವಾ ವಿನಾಯಿತಿಗೊಳಿಸಲಾದ ವರ್ಗಾವಣೆಯಾಗಿರುವ, 2 (ಡಿ) ಪ್ರಕರಣದ ಮೂಲಕ, ಪರಿಭಾಷಿಸಲಾದಂತೆ ಹಸ್ತಾಂತರಣ	ಮೌಲ್ಯದ ಶೇ. 7.5 ರಷ್ಟು
20(6)	(Securitization) ಭದ್ರತೀಕರಣ ಪ್ರಕ್ರಿಯೆಯಲ್ಲಿ ವಿಶೇಷ ಉದ್ದೇಶ ವಾಹನ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಡುವುದಕ್ಕೆ ಮೂಲಕರ್ತನಿಂದ ಸ್ವೀಕೃತಿಗಳನ್ನು ವಹಿಸಿಕೊಡುವುದಕ್ಕೆ ಸಂಬಂಧಿಸಿದ್ದಲ್ಲಿ	ಪ್ರತಿ ಒಂದು ನೂರು ರೂಪಾಯಿ ಅಥವಾ ಭಾಗಾಂಶಕ್ಕೆ ಒಂದು ರೂಪಾಯಿ ಗರಿಷ್ಠ ಒಂದು ಲಕ್ಷ ರೂ. ಮಿತಿಗೆ ಒಳಪಟ್ಟು
22	ಮುದ್ರಾಂಕ ಶುಲ್ಕದ ಆಕರಣೆಗೆ ಒಳಪಡುವ ಮತ್ತು ಸರಿಯಾದ ಮುದ್ರಾಂಕ ಶುಲ್ಕವನ್ನು ಪಾವತಿಸಿರುವ ಯಾವುದೇ ಪತ್ರ. ಎ) ಮೂಲ ಪತ್ರದ ಮೇಲೆ ವಿಧಿಸಲಾಗುವ ಮುದ್ರಾಂಕ ಶುಲ್ಕವು	ಮೂಲ ಪತ್ರದ ಮೇಲೆ ಪಾವತಿರುವಷ್ಟೆ ಮುದ್ರಾಂಕ ಶುಲ್ಕ ರೂ.50/–

	ರೂ.4.50ನ್ನು ಮೀರದಿದ್ದಲ್ಲಿ ಬಿ) ಇತರೆ ಯಾವುದೇ ಪ್ರಕರಣದಲ್ಲಿ	
28	ದಾನಕೊಡುವ ವ್ಯಕ್ತಿಗೆ ಸಂಬಂಧಿಸಿದಂತೆ ಕುಟುಂಬ ಎಂಬ ಪದವು "ಗಂಡ, ಹೆಂಡತಿ, ಮಗ, ಮಗಳು, ಸೊಸೆ, ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳು ಇವರನ್ನು ಒಳಗೊಳ್ಳುತ್ತದೆ,	ರೂ. 1,000/–
30(1) (ಎ) (ಬಿ) (ಸಿ)	(1) ಒಳಗುತ್ತಿಗೆ ಅಥವಾ ಉಪ ಗುತ್ತಿಗೆಯ ಸೇರಿದಂತೆ ಗುತ್ತಿಗೆ ಮತ್ತು ಬಾಡಿಗೆ ಅಥವಾ ಒಳಬಾಡಿಗೆಗೆ ಕೊಡಲು ಒಪ್ಪಂದ ಎ) ಅಂತಹ ಗುತ್ತಿಗೆಯ ಮೂಲಕ ಬಾಡಿಗೆಯನ್ನು ನಿಗದಿಪಡಿಸಿರುವಲ್ಲಿ ಮತ್ತು ಯಾವುದೇ ರೀತಿಯ ಪ್ರೀಮಿಯಂ ಅನ್ನು ಸಂದಾಯ / ವಶಾವಣೆ ಮಾಡಿಲ್ಲದಿರುವಲ್ಲಿ	ಅಂತಹ ಗುತ್ತಿಗೆಯ ಮೇಲೆ ಪಾವತಿಸಬೇಕಾದ ಒಟ್ಟು ಬಾಡಿಗೆಯ ಮೇಲೆ ಅನುಬಂಧ–12ರಂತೆ ಬಾಂಡ್‌ಗೆ ಅನ್ವಯವಾಗುವ ದರ.
	i) ಗುತ್ತಿಗೆಯ ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ ii) ಗುತ್ತಿಗೆಯು ಒಂದು ವರ್ಷಕ್ಕೆ ಮೀರಿದ ಆದರೆ ಐದು ವರ್ಷಕ್ಕಿಂತ ಕಡಿಮೆ ಇರುವ ಅವಧಿಗೆ ಇರುವುದೆಮದು ತಾತ್ಪರ್ಯವಾಗಿರುವಲ್ಲಿ iii) ಗುತ್ತಿಗೆಯು ಐದು ವರ್ಷಕ್ಕೆ ಮೀರಿದ ಆದರೆ ಹತ್ತು ವರ್ಷಗಳಿಗಿಂತ ಕಡಿಮೆ ಇರುವ ಅವಧಿಗೆ ಇರುವುದೆಮದು ತಾತ್ಪರ್ಯವಾಗಿರುವಲ್ಲಿ iv) ಗುತ್ತಿಗೆಯು ಹತ್ತು ವರ್ಷಕ್ಕೆ ಮೀರಿದ ಆದರೆ 20 ವರ್ಷಗಳಿಗಿಂತ ಕಡಿಮೆ ಇರುವ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ	ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೌಲ್ಯ ಅಥವಾ ಮೊತ್ತದ ಮೇಲೆ ಅನುಬಂಧ–12ರಂತೆ ಬಾಂಡ್‌ಗೆ ಅನ್ವಯವಾಗುವ ದರ. ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೊತ್ತ ಅಥವಾ ಮೌಲ್ಯದ ಎರಡರಷ್ಟು ಮೊತ್ತದ ಮೇಲೆ ಅನುಚ್ಛೇದ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೊತ್ತ ಅಥವಾ ಮೌಲ್ಯದ

	v) ಗುತ್ತಿಗೆಯು 20ವರ್ಷಗಳಿಗಿಂತ ಮೀರಿದ ಆದರೆ 30 ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗಿರುವಲ್ಲಿ vi) ಗುತ್ತಿಗೆಯು 30ವರ್ಷಗಳಿಗೆ ಮೀರಿದ ಅಥವಾ ಶಾಶ್ವತ ಅಥವಾ ಯಾವುದೇ ನಿರ್ದಿಷ್ಟ ಅವಧಿಗೆ ನಿಗಧಿಪಡಿಸದ	ಎರಡರಷ್ಟು ಮೊತ್ತದ ಮೇಲೆ ಅನುಚ್ಛೇದ 20ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೊತ್ತ ಅಥವಾ ಮೌಲ್ಯದ 3ರಷ್ಟು ಮೊತ್ತಕ್ಕೆ ಸಮನಾದ ಮೊಬಲಗಿನ ಮೇಲೆ ಅನುಚ್ಛೇದ 20ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ ಕಾದಿರಿಸಿದ ವಾರ್ಷಿಕ ಸರಾಸರಿ ಬಾಡಿಗೆಯ ಮೌಲ್ಯ ಅಥವಾ ಮೊತ್ತದ 4 ಪಟ್ಟು ಮೊತ್ತಕ್ಕೆ ಸಮನಾಧ ಮೊಬಲಗಿನ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ. ಕಾದಿರಿಸಿದ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮೊಬಲಗು ಅಥವಾ ಮೌಲ್ಯಕ್ಕಾಗಿನ ಹಸ್ತಾಂತರ (ಸಂ. 20 (1)) ರಂತೆ ಶುಲ್ಕ
30 (1) (ಬಿ) (i) (ii)	ಹೀಗಿರುವಂತೆ	ಹೀಗಿರುವಂತೆ
31 (1) (ಸಿ) (i) (ii)	ಹೀಗಿರುವಂತೆ	ಹೀಗಿರುವಂತೆ

32 A	ಸ್ಥಿರಾಸ್ತಿ ಅಥವಾ ಚರಾಸ್ತಿಯ ಪರವಾನಗಿ ಎಂದರೆ ಮಾಲೀಕರು ಅಥವಾ ಪ್ರಾಧಿಕಾರಿಯು ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವುದನ್ನು ಪಡೆದು ಪರವಾನಗಿಯನ್ನು ನೀಡಿರುವಲ್ಲಿ ಎ) ಪರವಾನಗಿಯನ್ನು ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವುದನ್ನು ಪಡೆದು ಪರವಾನಗಿಯನ್ನು ನೀಡಿರುವಲ್ಲಿ (i) ಪರವಾನಗಿಯು ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ (ii) ಪರವಾನಗಿಯು ಒಂದು ವರ್ಷಕ್ಕಿಂತ ಕಡಿಮೆ ಇರದ ಆದರೆ ಐದು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ (iii) ಪರವಾನಗಿಯು ಐದು ವರ್ಷಕ್ಕಿಂತ ಕಡಿಮೆ ಇರದ ಆದರೆ ಹತ್ತು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ (iv) ಪರವಾನಗಿಯು ಹತ್ತು ವರ್ಷಕ್ಕಿಂತ ಕಡಿಮೆ ಇರದ ಆದರೆ ಇಪ್ಪತ್ತು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ (v) ಪರವಾನಗಿಯು ಇಪ್ಪತ್ತು ವರ್ಷಕ್ಕಿಂತ ಕಡಿಮೆ ಇರದ ಆದರೆ ಮೂವತ್ತು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ ಬಿ) ಪರವಾನಗಿಯನ್ನು ಯಾವುದೇ	ಪರವಾನಗಿಯಡಿ ಪಾವತಿಸಬೆಕಾದ ಅಥವಾ ವಶಾವಣೆ ಮಾಡಬೇಕಾದ ಸಂಪೂರ್ಣ ಮೊತ್ತದ ಮೇಲೆ ಅನುಚ್ಛೇಧ 12 ರಂತೆ ಬಾಂಡ್‌ಗೆ ಅನ್ವಯವಾಗುವ ದರ ವಾರ್ಷಿಕ ಸರಾಸರಿ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತ ಅಥವಾ ಮೌಲ್ಯದ ಮೆಲೆ ಅನುಚ್ಛೇಧ 12 ರಂತೆ ಬಾಂಡ್‌ಗೆ ಅನ್ವಯವಾಗುವ ದರ ವಾರ್ಷಿಕ ಸರಾಸರಿ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತ ಅಥವಾ ಮೌಲ್ಯದ ಮೇಲೆ ಅನುಚ್ಛೇಧ 20ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ ವಾರ್ಷಿಕ ಬಾಡಿಗೆಯ ಎರಡು ಪಟ್ಟು ಮೊತ್ತ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತದ ಮೇಲೆ ಅನುಚ್ಛೇದ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ

LA VS-F-40

	ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವು ಮೊತ್ತವನ್ನು ಕಾಯ್ದಿರಿಸದೇ ಒಟ್ಟು ಮುಂಗಡ ಮೊಬಲಗಿಗೆ ನೀಡಿರುವಲ್ಲಿ ಸಿ) ಪರವಾನಗಿಯನ್ನು ಒಟ್ಟು ಮುಂಗಡ ಮೊಬಲಗಿನ ಜೊತೆಗೆ ಬಾಡಿಗೆ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತವನ್ನು ಪಡೆದು ನೀಡಿರುವಲ್ಲಿ	ಸರಾಸರಿ ಬಾಡಿಗೆಯ ಮೂರು ಪಟ್ಟು ಮೊತ್ತ ಅಥವಾ ಶುಲ್ಕ ಅಥವಾ ಬೇರಾವುದೇ ಹೆಸರಿನಿಂದ ಕರೆಯಲ್ಪಡುವ ಮೊತ್ತದ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ ಪರವಾನಗಿ ಪತ್ರದಲ್ಲಿ ನಿಗದಿಪಡಿಸಿರುವ ಒಟ್ಟು ಮುಂಗಡ ಮೊಬಲಗಿನ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ ಒಟ್ಟು ಮುಂಗಡ ಮೊಬಲಗನ್ನು ಪಾವತಿ ಅಥವಾ ವಶಾವಣೆ ಮಾಡಿರದಿದ್ದಲ್ಲಿ ಪರವನಗಿಯ ಮೇಲೆ ಪಾವತಿಸಬೇಕಾದ ಮುದ್ರಾಂಕ ಶುಲ್ಕದ ಜೊತೆಗೆ ಪರವಾನಗಿಯಲ್ಲಿ ನಿಗಧಿಪಡಿಸಿರುವ ಒಟ್ಟು ಮೊತ್ತದ ಮೇಲೆ ಅನುಚ್ಛೇಧ 20 ರಂತೆ ಹಸ್ತಾಂತರಕ್ಕೆ ಅನ್ವಯವಾಗುವ ದರ
41(ಇ)	ಮೊಖ್ತಾರನಾಮೆಯನ್ನು ಪ್ರತಿಫಲಕ್ಕಾಗಿ ಮತ್ತು ಸ್ಥಿರಾಸ್ತಿಯನ್ನು ಮಾರಾಟ ಮಾಡುವ ಅಧಿಕಾರದೊಂದಿಗೆ ನೀಡಲಾಗಿದ್ದಲ್ಲಿ.	ಪ್ರತಿಫಲದ ಮೊತ್ತಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಕ್ಕೆ ಅನ್ವಯವಾಗುವ

		ಮುದ್ರಾಂಕ ಶುಲ್ಕ
41(ಇಎ)	ಕರ್ನಾಟಕ ರಾಜ್ಯದಲ್ಲಿನ ಯಾವುದೇ ಸ್ಥಿರಾಸ್ತಿಯನ್ನು ನಿರ್ಮಾಣ / ಅಭಿವೃದ್ಧಿ / ಮಾರಾಟ / ವರ್ಗಾವಣೆ ಉದ್ದೇಶಕ್ಕಾಗಿ ಅಭಿವೃದ್ಧಿಕಾರರಿಗೆ ನೀಡಲಾಗಿದ್ದು, ಸ್ವತ್ತಿನ ಮಾರುಕಟ್ಟೆ ಮೌಲ್ಯವು 1) ರೂ. 1 ಕೋಟಿಯನ್ನು ಮೀರದಿದ್ದಲ್ಲಿ 2) ರೂ. 1 ಕೋಟಿಯನ್ನು ಮೀರಿದ್ದು 2 ಕೋಟಿಯನ್ನು ಮೀರದಿದ್ದಲ್ಲಿ 3) 2 ಕೋಟಿಯನ್ನು ಮೀರಿದ್ದು 5 ಕೋಟಿಯನ್ನು ಮೀರದಿದ್ದಲ್ಲಿ 4) 5 ಕೋಟಿಯನ್ನು ಮೀರಿದ್ದು 10 ಕೋಟಿಯನ್ನು ಮೀರದಿದ್ದಲ್ಲಿ 5) 10 ಕೋಟಿಯನ್ನು ಮೀರಿದಲ್ಲಿ	 ರೂ. 10000/– ರೂ. 20000/– ರೂ. 50000/– ರೂ. 100000/– ರೂ. 150000/–
45(ಎ) (i) ಮತ್ತು (ii)	ಅನುಚ್ಛೇದ 45 ಹಕ್ಕುಬಿಡುಗಡೆ ಪತ್ರವೆಂದರೆ ಯಾವುದೇ ಪತ್ರ (ಕಲಂ 24 ರಲ್ಲಿ ಅವಕಾಶ ಕಲ್ಪಿಸಿಲ್ಲದ)ದ ಮೂಲಕ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಪರವಾಗಿ ಅಥವಾ ಯಾವುದೇ ನಿರ್ದಿಷ್ಟ ಸ್ವತ್ತಿನ ಬಗ್ಗೆ ತನ್ನ ಹಕ್ಕನ್ನು ಬಿಟ್ಟುಕೊಡುವಂತಹ ಪತ್ರ A) ಹಕ್ಕು ಬಿಡುಗಡೆಯು ಕುಟುಂಬದ ಸದಸ್ಯರ ನಡುವೆ ಅಲ್ಲದಿದ್ದಲ್ಲಿ (i) ಹಕ್ಕು ಬಿಡುಗಡೆ ಪ್ರತಿಫಲವನ್ನು ಪಡೆಯದೇ ಮಾಡುತ್ತಿದ್ದಲ್ಲಿ (ii) ಪ್ರತಿಫಲವನ್ನು ಪಡೆದು ಹಕ್ಕು ಬಿಡುಗಡೆ ಮಾಡುತ್ತಿದ್ದಲ್ಲಿ B) ಹಕ್ಕು ಬಿಡುಗಡೆಯು ಕುಟುಂಬದ ಸದಸ್ಯರ ನಡುವೆ ಇದ್ದಲ್ಲಿ (ವಿವರಣೆ: ಕುಟುಂಬ ಪದದ ಅರ್ಥವು	 ಹಕ್ಕು ಬಿಡುಗಡೆಗೆ ಒಳಪಟ್ಟ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 25 ಹಕ್ಕು ಬಿಡುಗಡೆಗೆ ಒಳಪಟ್ಟ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಕ್ಕೆ ಅನ್ವಯವಾಗುವ ಮುದ್ರಾಂಕ ಶುಲ್ಕದ ಶೇ. 50 ರಷ್ಟು ರೂ. 1000/–

	ಗಂಡ, ಹೆಂಡತಿ, ಮಗ, ಮಗಳು, ತಂದೆ, ತಾಯಿ, ಸಹೋದರ, ಸಹೋದರಿ ಮೃತಪಟ್ಟ ಮಗನ ಹೆಂಡಿತ ಅಥವಾ ಮೃತಪಟ್ಟ ಮಗ ಅಥವಾ ಮಗಳ ಮಕ್ಕಳು ಎಂಬುದನ್ನು ಒಳಗೊಳ್ಳುತ್ತದೆ)	
48	ಈ ಉಪ ಕಂಡಿಕೆಯ ಉದ್ದೇಶಕ್ಕಾಗಿ ವ್ಯವಸ್ಥಾ ಕರ್ತನಿಗೆ ಸಂಬಂಧಿಸಿದಂತೆ 'ಕುಟುಂಬ' ಪದವು ಗಂಡ, ಹೆಂಡತಿ, ಮಗ, ಮಗಳು, ಸೊಸೆ, ಸಹೋದರರು, ಸಹೋದರಿಯರು ಮತ್ತು ಮೊಮ್ಮಕ್ಕಳನ್ನು ಒಳಗೊಳ್ಳುತ್ತದೆ.	ರೂ. 1,000/–

ಅನುಬಂಧ –7

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಧನವಿನಿಯೋಗ (ಸಂಖ್ಯೆ. 1) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ. 25)

2008–09ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2008–09ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು:– ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ. 1) ಅಧಿನಿಯಮ 2009 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2008–09ನೇ ಹಣಕಾಸು ವರ್ಷಕ್ಕಾಗಿ 620744.56 ಲಕ್ಷ ರೂಪಾಯಿಗಳ ನೀಡಿಕೆ:– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2008–09ನೇ ಹಣಕಾಸು ಅವಧಿಯಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ **ಆರು ಸಾವಿರದ ಇನ್ನೂರ**